R No KRNN 12

18-3-1975

58 th Year ನೇ ವರ್ಷ

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

ಸತ್ಯವಾದಿ
SATYAVADI

Golden Jubilee Celebrated Paper
Satyavadi Daily
Mysore 4
— For Influential Publicity —

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು ಧರ್ಮಸ್ಥ ಚಾರವೀರ ಎಂ. ಎಸ್. ಕೃಷ್ಣರಾವ್ (3 ಕ.ಸ

ವಿದ್ಯೇಶೀ ಕಳ್ಳ ನಾಗಾಣಿಕೆ ಗಡಿಯಾರಗಳ ವಶ

ಆತ್ಮಹತ್ಯೆ

ನವ ದೆಹಲಿ — ವ್ಯವಸಾಯ ಸಂಶೋಧನಾ ಸಮಿತಿಯ ಓರ್ವ ಹಿರಿಯ ತಾಂತ್ರಿಕ ಸಹಾಯಕಳಾಗಿದ್ದ 28 ವರ್ಷದ ಕುಮಾರಿ ಕೆ. ಜ್ಯೋತಿ ಕೃಷ್ಣಭವನದ 5 ನೆಯ ಅಂತಸ್ತಿನಿಂದ ಬಿದ್ದು ಆತ್ಮಹತ್ಯೆ ಮಾಡಿಕೊಂಡಳು ತನ್ನ ಸಾವಿಗೆ ಜವಾಬ್ದಾರರು ಯಾರೂ ಅಲ್ಲವೆಂದು ಅವಳು ಬರೆದಿರುವ ಕಾಗದಗಳು ತಿಳಿಸಿವೆ ತನ್ನ ಶರೀರವನ್ನು ಅಗ್ನಿಗೆ ಸಮರ್ಪಿಸುವ ಬದಲು ವೈದ್ಯಕೀಯ ಪ್ರಯೋಗಗಳಿಗೆ ಉಪಯೋಗಿಸಬೇಕೆಂಬ ಇಚ್ಛೆ ವ್ಯಕ್ತಪಡಿಸಿರುವಳು.

●

ಅಪಮೌಲ್ಯ

ನವ ದೆಹಲಿ — ರೂಪಾಯಿಯನ್ನು ಶೇಕಡ 28 ಅಪಮೌಲ್ಯ ಮಾಡಿದೆ.

★

ಗಡಿಯಾರಗಳ ವಶ

ಮಂಗಳೂರು — ಪಾರಕ್ಕಳ್ ಕರ್ನಾಟಕ ಇಂಜಿನೀರಿಂಗು ಕಾಲೇಜು ಹತ್ತಿರ ಅಬ್ಕಾರಿ ಅಧಿಕಾರಿಗಳು ಒಂದು ಜೀಪು ಮತ್ತು ಅದರಲ್ಲಿದ್ದ ರೂ. 21 ಲಕ್ಷ ಬೆಲೆ ಬಾಳುವ 17 ಸಾವಿರ ವಿದೇಶೀ ಕೈಗಡಿಯಾರಗಳನ್ನು ವಶಪಡಿಸಿಕೊಂಡರು

★

ಆರು ಮಂದಿ ಸಾವು

ಶಿಲಾಂಗ್ — ಜೆಮಾಬೋ ಹತ್ತಿರ ಒಂದು ಸಿಮೆಂಟು ಮತ್ತು ಕಟ್ಟಡ ನಿರ್ಮಾಣ ಪದಾರ್ಥಗಳು ತುಂಬಿದ್ದ ಟ್ರಕ್ ರಸ್ತೆ ತಪ್ಪಿದ ಅನಾಹುತದಲ್ಲಿ 6 ಮಂದಿ ಸತ್ತು ಹಲವಾರು ಗಾಯಗೊಂಡರು.

★

ಗುಲ್ಬರ್ಗಾದಲ್ಲಿ 6000 ಫೋಟೊ ಕೇಷನ್ ಕಾರ್ಡುಗಳು ಕಳ್ಳತನವಾಗಿ ಅವನ್ನು ವಜಾ ಮಾಡಲಾಯಿತು

ಪಾಕ್‌ನ ಅಹ್ವಾನ

ನವ ದೆಹಲಿ — ವಾಣಿಜ್ಯಾನಕ್ಕೆ 75-76 ರಲ್ಲಿ ಒಂದು ಭಾರತ ಕ್ರಿಕೆಟ್ ತಂಡವನ್ನು ಕಳುಹಿಸುವಂತೆ ಪಾಕಿಸ್ತಾನ ಆಹ್ವಾನಿಸಿದೆ

○

ತಪ್ಪು ಮಾಡಿಲ್ಲ

ಬೆಂಗಳೂರು — ನಿರ್ಮಲ ಇಂಜಿನೀರಿಂಗ್ ಕಂಪೆನಿ ವ್ಯವಹಾರದಲ್ಲಿ ಅರ್ಜರು ಮಾಡಿದ್ದರಲ್ಲಿ ತಾವು ಯಾವ ತೀವ್ರ ಅಡಚಣೆ ತರ್ಪನ್ನು ಮಾತಿಲ್ಲವೆಂದು ವಿಧಾನ ಪರಿಷತ್‌ನಲ್ಲಿ ಮುಖ್ಯ ಮಂತ್ರಿ ಶ್ರೀ ಡಿ. ದೇವರಾಜ ಅರಸ್ ರವರು ತಿಳಿಸಿದರು ತಾವು ಯಾವುದೆ ಫೈಲು ತರಿಸಲು, ಅರ್ಜಿ ರದ್ದು ಮಾಡಲು ಪೂರ್ಣ ಅಧಿಕಾರವಿರುವುದಾಗಿಯೂ, ತನ್ನ ಸಹೋದ್ಯೋಗಿಗಳ ಯಾವುದೇ ಅಜ್ಞೆ ವಾಪಸಾತಿ ಅಥವಾ ಬದಲಾವಣೆ ಮಾಡುವುದು ತನ್ನ ಹಕ್ಕೆಂದು ತಿಳಿಸಿದರು.

★

ಪರೀಕ್ಷೆಗಳು ಮುಂದಕ್ಕೆ

ಮೈಸೂರು — ವಿಶ್ವ ವಿದ್ಯಾನಿಲಯವತ್ತು ಕಾಲೇಜು ಉಪಾಧ್ಯಾಯರ ಸಂಘದವರು ಪರೀಕ್ಷೆ ಬಹಿಷ್ಕಾರ ಚಳುವಳಿ ಹೂಡಿರುವುದರಿಂದ, 2 ದಿನಗಳಲ್ಲಿ ಆರಂಭವಾಗಲಿರುವ ವಿಶ್ವವಿದ್ಯಾನಿಲಯದ ಪರೀಕ್ಷೆಗಳು ಮುಂದೂಡಲಿರುವುದು ಸಂಭವನೀಯ

●

ನಡಿಗೆ ದಾಖಲೆ

ಪ್ಯಾರಿಸ್ — ಫ್ರಾನ್ಸಿನ ಪಿಯೆರ್ ಗಾರ್ನಿಯಾರವರು ಭಾನುವಾರ 9 ಗಂಟೆ 33 ನಿಮಿಷ 6 ಸೆಕೆಂಡುಗಳಲ್ಲಿ ಪೂರ್ತಿ ಕಿಲೋ ಮೀಟರ್ ನಡೆದು ವಿಶ್ವದಾಖಲೆ ಸ್ಥಾಪಿಸಿದರು

★ 6 ವಾರಗಳಲ್ಲಿ ಮಜ್ರಾಪಿಲ್ಲಿ ಪೈರಿಲ್ಲ ದಂತಾಗುವ ಪರಿಸ್ಥಿತಿ ಇದೆ

ಸರಕಾರಿ ನೌಕರರಿಗೆ ಮನೆ ಕಟ್ಟಲು ಸಾಲ

ಬೆಂಗಳೂರು— ರಾಜ್ಯ ಸರಕಾರದ ನೌಕರರಿಗೆ ಮನೆ ಕಟ್ಟಲು, ಮನೆ ಕೊಳ್ಳಲು, ಮನೆ ರಿಪೇರಿ ಮತ್ತು ವಾಹನ ಕೊಳ್ಳಲು ಕೊಡುವ ಸಾಲದ ಮೇಲಿದ್ದ ಪ್ರತಿಬಂಧಕ ಪನ್ನು ಸರಕಾರ ತೆಗೆದುಹಾಕಿದೆ.

○

ಪಂಚಮುಹೂರ್ತೋತ್ಸವ

ಪಂಜನಗೂಡಿನ ಶ್ರೀಕಂಠೇಶ್ವರಸ್ವಾಮಿ ದೇವಾಲಯದ ದೊಡ್ಡ ಜಾತ್ರೆ ಪಂಚಮುಹೂರ್ತೋತ್ಸವವು ಮಾರ್ಚ್ 25 ರಂದು ಬೆಳಿಗ್ಗೆ 7-45 ಘಂಟೆಗೂ ಹಾಗೂ ತೆಪ್ಪೋತ್ಸವವು ಮಾರ್ಚ್ 27 ರಂದು ಸಂಜೆ 7 ಘಂಟೆಗೂ ನಡೆಯಲಿದ್ದು, ಈ ಉತ್ಸವಗಳಲ್ಲಿ 30 ಸಹಸ್ರಕ್ಕೂ ಅಧಿಕ ಸಂಖ್ಯೆಯಲ್ಲಿ ಭಕ್ತಾದಿಗಳು ಭಾಗವಹಿಸುವ ನಿರೀಕ್ಷೆಯಿರಲಾಗಿದೆ ಎಂದೂ ತಿಳಿಸಲಾಗಿದೆ.

○

ಕೋತಿಗಳ ಅಮದಿಗೆ ಪ್ರತಿಬಂಧಕ

ಅನೇಕಾಂಶಕಾಡಲ್ಲಿ ಕೋತಿಗಳನ್ನು ಪ್ರಾಣಿ ಪ್ರಾಣಿಗಳಿಗಾಗಿ ಸಾಕುವವರಿಗೆ ಮಾರುವುದಕ್ಕೆ ಅಥವಾ ಮಾಡುವುದನ್ನು ಪ್ರತಿಬಂಧಿಸಲು ಯೋಜಿಸಲಾಗಿದೆ.

●

ಚಲನಚಿತ್ರ ಪ್ರಶಸ್ತಿ ಪ್ರದಾನ

ಬೆಂಗಳೂರು— ಎಂಟನೇ ರಾಜ್ಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭವು ವೈಭವವಾಗಿ ನೆರವೇರಿತು.

★

ಅಣುಶಕ್ತಿ ಹೃದಯ

ರಷ್ಯಾದ ಡಾಕ್ಟರೊಬ್ಬರು 33 ವರ್ಷದ ವನೊಬ್ಬನಿಗೆ ಅಣುಶಕ್ತಿ ಹೃದಯವನ್ನು ಇಟ್ಟರುವರು.

★

ಕ್ಷಮಾಪಣೆಯಿಂದ ಕೊನೆಗೊಂಡಿತು

ಬೆಂಗಳೂರು— ಇಂದಿನ ಜಿಗೇಡಿನ ಕಮ್ಯಾಂಡೆಂಟರೂ, ಮುಖ್ಯಮಂತ್ರಿ ದೇವರಾಜ ಅರಸ್‌ರವರ ಅಳಿಯಂದರೂ ಆದ ಶ್ರೀ ಎಂ. ವಿ. ನಟರಾಜ್‌ರು, ಶಾಸನ ಸಭೆಗೆ ಬೇಷರತ್ ಕ್ಷಮಾಪಣೆ ಸಲ್ಲಿಸಿದ್ದರಿಂದ ಅವರ ಮೇಲಿನ ಹಕ್ಕುಬಾಧ್ಯತಾ ಚ್ಯುತಿ ಮತ್ತು ಸಭೆಗೆ ತಿರಸ್ಕಾರದ ಆರೋಪಣೆ ಬಿಡಲು ನಿರ್ಧರಿಸಲಾಯಿತು.

ಪ್ರಧಾನಿಯರ ಚುನಾವಣೆ ವಿರುದ್ಧ

ಅಲಹಾಬಾದು — ಚುನಾವಣೆ ಸಂಬಂಧದ ನೊಖದ್ದಮೆಯಲ್ಲಿ ಪ್ರಧಾನಿ ಇಂದಿರಾರ ಪರ ಪ್ರಮುಖ ನ್ಯಾಯವಾದಿ ಶಾಲ್ವಿ ವಾಲರು ಸಾಕ್ಷ್ಯ ಮಾರ್ಗದರ್ಶನ ನಡೆಸುವ ನಿರೀಕ್ಷೆ ಇದೆ - ಶ್ರೀಮತಿ ಇಂದಿರಾರವರ ಪರದ 11 ವಕೀಲರಲ್ಲಿ ಇವರೂ ಇದ್ದಾರೆ – ಶ್ರೀ ರಾಜನಾರಾಯಣರ ಪರವಾಗಿ ಮೊದಲಿನಿಂದಲೂ ಇರುವ ಉತ್ತರ ಪ್ರದೇಶದ ಮಾಜಿ ಅಟರ್ನಿ – ಜನರಲ್ಲರೂ ಸೇರಿ 11 ವಕೀಲರಿದ್ದಾರೆ – ಶ್ರೀಮತಿ ಇಂದಿರಾರವರು ಸಾಕ್ಷ್ಯ ನೀಡುವ 24 ನೇ ಕೋರ್ಟಿಗೂ ಮತ್ತು ಪೂರ್ತಿ ಹೈ ಕೋರ್ಟು ಕಟ್ಟಡಕ್ಕೂ ಪ್ರವೇಶವನ್ನು ಮುಖ್ಯ ನ್ಯಾಯಾಧೀಶರೂ ಪ್ರತಿಬಂಧಿಸಿರುವರು – ರಕ್ಷಣಾ ವ್ಯವಸ್ಥೆ ಬಲಗೊಳಿಸಲಾಗಿದೆ – ವಿಶಾಲ ಹೈ ಕೋರ್ಟು ಸುತ್ತ ಬಂದ ಕಡೆಗಳೂ ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗುವ ಕಡೆ ಕಟ್ಟೆಕಟ್ಟಿ ಹಾಕಲಾಗಿದೆ.

ಟೈಪಿಂಗ್ ಫಾಜು ರೂ. 1968!

ಆಹವಾದಾಬಾದು— ಜೋಪಡಿವಾಸಿಗಳಿಂದ ಶೇಖರಿಸಲ್ಪಟ್ಟ ಹಣವನ್ನು ಕಾಂಗ್ರೆಸಿಗರು ದುರುಪಯೋಗ ಪಡಿಸಿರುವರೆಂದು ಆಪಾದಿಸಲಾಗಿದೆ — ಒಬ್ಬ ಕಾಂಗ್ರೆಸ್ ಶಾಸಕರು ಇವರಿಂದ ರೂ. 2700 ಪಡೆದಿದ್ದು, ಅವರ ಬಳಿ ಹೌಸಿಂಗ್ ಬೋರ್ಡಿನೊಂದಿಗೆ ವ್ಯವಹಾರ ಪ್ರಾರಂಭಿಸಿರುವ ದಾಖಲೆಯೂ, ಈಬಗ್ಗೆ ಟೈಪಿಂಗಿಗೇ ರೂ. 1968 ಖರ್ಚಾಗಿರುವುದೆಂದೂ ಹೇಳಿದಾರೆ

ವುಡ್‌ಲಾಂಡ್ 14 3 75 ರಿಂದ

ಅಮೋಘ 3 ನೇ ವಾರ

ದಾರಿ ತಪ್ಪಿದ ಮಗ

ಅಶ್ವಿನಿ ಕನ್ನಡ ಕಲಾಕೃತಿ ಪಾತ್ರ– ರಾಜಕುಮಾರ್ (ದ್ವಿಪಾತ್ರದಲ್ಲಿ)

ವಜ್ರಮುನಿ, ಅಶ್ವತ್, ಬಾಲಕೃಷ್ಣ, ಕಲ್ಪನ, ಉದಯ ದಿನ ೫೦ ಪ್ರದರ್ಶನಗಳು

ಅಪೂರ್ವ 14 3 75 ರಿಂದ

ಪಣಕೋಟಂ

★

ಅಮೋಘ ತಮಿಳು ಚಿತ್ರ

ಹೊಸ ಕಾಪಿ ೨೦೦ ಪ್ರದರ್ಶನಗಳು

ಭಾರತದಲ್ಲಿ ಗೋವಧೆ

ಪೂರ್ಣ ನಿಶ್ಶೇಧವಾಗಲಿ



Protect the Cow

Help The Gorakshana

— Humanitarian Propoganda Monthly —

ದಾಖಲೆ

ಇಂಡಿಯಾನಾದ ರಾಜ್ಯಕಾರಾಗೃಹದಿಂದ ಇತ್ತೀಚೆಗೆ ಜಾನ್ಸನ್ ಪಾಂಡ್ಲೆಕ್ ಗ್ರಿಗ್ಸ್‌ಬಿ ಎಂಬುವನು ಬಿಡುಗಡೆಯಾದ ; ಅವನು ತನ್ನ ಜೀವಿತದಲ್ಲಿ 68 ವರ್ಷ ಕಾ ಕಂಬಿಯೆದಲ್ಲಿ ಕಳೆದಿದ್ದ ; ಪೆರೋಲ್‌ಗೆ ಹುಟ್ಟಿಬಂದಂತೆ ಭಾಸವಾಗುತ್ತಿದೆ ಎಂದು ಹೇಳಿದ ಹೊರಗೆ ಬಂದು ; 1968 ರ ಆಗಸ್ಟ್ ೧೯ರಂದು ಅವನು ತನ್ನ ಜೀವಾವಧಿ ಶಿಕ್ಷೆಯನ್ನು ಆರಂಭಿಸಿದ ಕೊಲೆ ಅಪರಾಧನೆಗೀಡಾಗಿ– ಅವನು 64 ವರ್ಷಗಳ ಜಾಮಲೆ ಸ್ಥಾಪಿಸಿದ್ದ ರಿಚರ್ಡ್ ಹೋನೆರ್‌ನ ದಾಖಲೆಯನ್ನೂ ವಿಸ್ತರಿಸಿದ್ದಾನೆ – ಹೋಸ ೪ ೪ 1899 ರಿಂದ 1963 ರವರೆಗೆ ಕಾರಾಗೃಹದಲ್ಲಿದ್ದ.

ಕರ್ನಾಟಕ ಪಿ ಡಬ್ಲ್ಯು ಡಿ

ಎಕ್ಸಿಕ್ಯುಟೀವ್ ಇಂಜಿನಿಯರ್‌ರವರ ಕಚೇರಿ,

ಕಟ್ಟಡಗಳ ವಿಭಾಗ, ಮೈಸೂರು

ಸಂಕ್ಷಿಪ್ತ ಕೊಟೇಷನ್ ಪ್ರಕಟಣೆ

ನಂ. ಎಲ್–50 / ತಾ. 27–2–1975

ಈ ಕೆಳಗೆ ಕಂಡ ಕೆಲಸಗಳಿಗಾಗಿ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ರಿಜಿಸ್ಟರ್ ಆಗಿರುವ ಅಂಗೀಕರಿಸಲ್ಪಟ್ಟ ಕಂಟ್ರಾಕ್ಟರ್‌ಗಳಿಂದ ಅಥವಾ ಸ್ಪರ್ಧಾತ್ಮಕ ಪಡೆದಿರುವ ಸಂಸ್ಥೆಗಳಿಂದ ಕೆಲಸದ ಹೆಸರನ್ನು ಬರೆದ ಮೊಹರಾಚ ಕೊಟೇಷನ್‌ಗಳನ್ನು ವಿಧಾಯುಕ್ತವಾದ ಫಾರಂನಲ್ಲಿ ದ್ವಿಪ್ರತಿಗಳಲ್ಲಿ ಆಹ್ವಾನಿಸಲಾಗಿದೆ ಮತ್ತು ಅವನ್ನು ಮೈಸೂರು – 1 ರಲ್ಲಿ ಇರುವ, ಕಟ್ಟಡಗಳ ವಿಭಾಗದ, ಎಕ್ಸಿಕ್ಯುಟೀವ್ ಇಂಜಿನಿಯರ್‌ರವರು ತಮ್ಮ ಕಚೇರಿಯಲ್ಲಿ 29–3–1975 ರ ಮಧ್ಯಾಹ್ನ 4 ಗಂಟೆ ವರೆಗೆ ಸ್ವೀಕರಿಸುವರು. ಸ್ವೀಕರಿಸಲಾದ ಟೆಂಡರ್‌ಗಳನ್ನು ಸಾಧ್ಯವಾದರೆ ಅದೇ ದಿನ ಒಡೆಯಲಾಗುವುದು. 20–3–1975 ರಿಂದ 27–3–1975 ರ ವರೆಗೆ (ಎರಡು ದಿನಗಳೂ ಸೇರಿ) ಕೆಲಸದ ಎಲ್ಲಾ ದಿನಗಳಲ್ಲಿ ಕಚೇರಿ ವೇಳೆಗಳಲ್ಲಿ ಮೈಸೂರು – 1 ರಲ್ಲಿರುವ, ಕಟ್ಟಡಗಳ ವಿಭಾಗದ, ಎಕ್ಸಿಕ್ಯುಟೀವ್ ಇಂಜಿನಿಯರ್‌ರವರಿಂದ, ಖಾಲಿ ಕೊಟೇಷನ್ ಫಾರಂಗಳನ್ನು ರೂ 5 ಕ್ಲಾಸ್ ಕೇಸಡ 3 ಮಾರಾಟ ಶೆರಿಗೆಯನ್ನು ಪ್ರತಿ ಸೆಟ್ ಫಾರಂಗೆ ಪಾವತಿ ಮಾಡಿದಲ್ಲಿ ಕೊಡಲಾಗುವುದು. ಮೈಸೂರು–1 ರಲ್ಲಿರುವ, ಕಟ್ಟಡಗಳ ವಿಭಾಗದ, ಎಕ್ಸಿಕ್ಯುಟೀವ್ ಇಂಜಿನಿಯರ್‌ರವರಿಂದ, ಕೆಲಸಗಳ ಮತ್ತು ಕೊಟೇಷನ್ ಪತ್ರಗಳ ಹೆಚ್ಚು ವಿವರಗಳನ್ನು ಪಡೆಯಬಹುದು

ಕೊಟೇಷನ್ ಒಪ್ಪಿಕೊಳ್ಳಲು ತಕ್ಕ ಅಧಿಕಾರವುಳ್ಳ ಅಧಿಕಾರಿಯವರಿಗೆ ಕಾರಣಗಳನ್ನು ಕೊಡದೆ ಯಾವುದೇ ಅಥವಾ ಎಲ್ಲಾ ಕೊಟೇಷನ್‌ಗಳನ್ನು ತಿರಸ್ಕರಿಸುವ ಹಕ್ಕು ಮೀಸಲಾಗಿದೆ.

ಕೆಲಸ ಮುಗಿಸಲು ಕಾಲಾವಧಿ : ಒಂದು ತಿಂಗಳು.

ಈ ಕೆಲಸದ ಹೆಸರು ಸ್ಥಳ	ಕೊಟೇಷನ್‌ಗೆ ಇಟ್ಟಿರುವ ಅಂದಾಜು ಕ್ರಮ	ಇ. ಎಂ. ಡಿ.
1. ಮೈಸೂರು ಸರಸ್ವತೀಪುರಂನಲ್ಲಿ ಇರುವ ಸರ್ಕಾರದ ಸಚಿವ ಪುಸ್ತಕ ಮುದ್ರಣಾಲಯಕ್ಕೆ 440 ವೋಲ್ಟ್‌ಗಳ 50 ಸೈಕಲ್‌ಗಳ 3 ಫೇಸ್ ಎ ಸಿ. ಮೇಲೆ ಉಪಯೋಗಿಸಲು ಯೋಗ್ಯವಾಗಿರುವ ಹಿಸ್ಟಾರ್ಜ್ ರೆಸಿಸ್ಟೆನ್ಸ್‌ನೊಂದಿಗೆ ಇರುವ 60 ಕೆ. ವಿ ಎ ಆಟೋ ಸಾಮರ್ಥ್ಯದ ಪವರ್ ಮಂಟ್ ಕೆಪಾಸಿಟರ್ಸ್ ಯೂನಿಟ್ ಸರಬರಾಜು ಮಾಡುವುದು. ಸರಬರಾಜಿನಲ್ಲಿ ಎಲ್ಲಾ ತೆರಿಗೆಗಳು, ಲೆವಿಗಳು, ಡ್ಯೂಟಿಗಳು ಮುಂತಾದವು ಸೇರಿವೆ (2 ಸೀ ಕಾಲ್)	ರೂ 10,000	250

ಸಹಿ/– ಎಲ್. ಶಿವಲಿಂಗಯ್ಯ,

ಎಕ್ಸಿಕ್ಯುಟೀವ್ ಇಂಜಿನಿಯರ್.

Edited Printed and Published by Dharmapracharanirata M. S. Krishna Rao (Proprietor) at the Satyavadi Press, Chamarajapuram Mysore